ಅಧ್ಯಕ್ಷರು : ಇದಕ್ಕೆ ಏತಕ್ಕೆ ಸಮಯ ಬೇಕು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಏತ ನೀರಾವರಿ ಪ್ರಾರಂಭ ಮಾಡಬೇಕಾದರೆ, ಅದಕ್ಕೆ ಇರತಕ್ಕಂತಹ ಎಲ್ಲಾ ಸೌಲಭ್ಯಗಳೂ ಆ ಸ್ಥಳದಲ್ಲಿ ಇವೆಯೇ ಹೇಗೆ? ಎನ್ನವುದಕ್ಕೆ ಅವರು ಸರ್ವೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ಸಚಿವರಿಗೆ ನಾನು ಇಷ್ಟೇ ಹೇಳುತ್ತೇನೆ You should lead Ministry. Let not your officials lead. ಉತ್ತರವನ್ನು ತರಿಸಿಕೊಡುತ್ತೇನೆ ನನ್ನ ಜವಾಬ್ದಾರಿಗೆ ಬಿಡಿ.

ಅಬಕಾರಿ ಉಪ ಆಯುಕ್ತ (ನಾರ್‌ಕೋಟಿಕ್ಸ್) ಹುದ್ದಗೆ ನೇಮಕಾತಿ

602 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರಕಾರವು ಅಬಕಾರಿ ಉಪ ಆಯುಕ್ತ (ನಾರ್‌ಕೋಟಿಕ್ಸ್) ಹುದ್ದೆಯನ್ನು ಮಾಡಿದೆಯೇ?

ಆ) 1990-91ನೇ ಸಾಲಿನಿಂದ ಈವರೆಗೆ ಎಷ್ಟು ಮತ್ತು ಬರಿಸುವ ಔಷಧಿಗಳ ಸರಬರಾಜು (ನಾರ್‌ಕೋಟಿಕ್ಸ್‌ಕ್ರೈಮ್) ಅಪರಾಧಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಅಬಕಾರಿ ಇಲಾಖೆಯ ವತಿಯಿಂದ ಪತ್ತೆ ಹಚ್ಚಲಾದ ಪ್ರಕರಣಗಳು ಎಷ್ಟು ಮತ್ತು ಪೋಲೀಸ್‌ಇಲಾಖೆಯಿಂದ ಪತ್ತೆ ಮತ್ತು ಪೋಲೀಸ್ ಇಲಾಖೆಯಿಂದ ಪತ್ತೆ ಹಚ್ಚಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಈ) ಅಬಕಾರಿ ಇಲಾಖೆಯಿಂದ ಪತ್ತೆ ಹಚ್ಚಲಾಗಿರುವ ಅಪರಾಧಗಳಲ್ಲಿ ಎಷ್ಟು ಅಪರಾಧಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿಗಳು):

ಅ) ಹೌದು

ಆ) 189 ಪ್ರಕರಣಗಳು.

ಇ) ಅಬಕಾರಿ ಇಲಾಖೆಯಿಂದ - 98

ಪೋಲೀಸ್ ಇಲಾಖೆಯಿಂದ - 91

ಈ) ಒಬ್ಬರಿಗೆ ಶಿಕ್ಷೆ ವಿಧಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, 1990-91 ಸಾಲಿನಿಂದ ಈವರೆಗೆ ಎಷ್ಟು ಮತ್ತುಬರಿಸುವ ಔಷಧಿಗಳ ಸರಬರಾಜು ಅಪರಾಧಗಳನ್ನು ಪತ್ತೆ ಹಚ್ಚಲಾಗಿದೆ ಅಂತ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ 189 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಎಂದು ಉತ್ತರದಲ್ಲಿ ತಿಳಿಸಿರುತ್ತಾರೆ, ಆದರೆ ಐದು ವರ್ಷಗಳಲ್ಲಿ 189 ಪ್ರಕರಣಗಳು ಮಾತ್ರವೇ ಅಥವಾ ಇದು 1990-91ಕ್ಕೆ ಮಾತ್ರವೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಇದು 1990-91 ರಿಂದ ಈವರೆಗೆ ಹಿಡಿದಿರತಕ್ಕಂಥ ಅಪರಾಧಗಳ ಸಂಖ್ಯೆ ಅಂದರೆ ಒಟ್ಟು ನಾಲ್ಕು ವರ್ಷದ ಅಪರಾಧಗಳ ಸಂಖ್ಯೆ.

ಶ್ರೀ ಯು.ಆರ್. ಸಭಾಪತಿ : ಸಾಕಷ್ಟು ಸಂಖ್ಯೆಯಲ್ಲಿ ಮತ್ತುಬರಿಸುವ ಮಾದಕ ದ್ರವ್ಯ ಸರಬರಾಜು ಆಗತ್ತಾ ಇದೆ. ಇದರ ಬಗ್ಗೆ ಸರ್ಕಾರ ಗಮನಹರಿಸಿದೆಯೇ ಎಂದು ಕೇಳುತ್ತಾ ಇದ್ದೇನೆ. ಎರಡನೆಯದಾಗಿ, ಕಳೆದ ಐದು ವರ್ಷಗಳಲ್ಲಿ 189

ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದರೂ ಕೂಡ ಕೇವಲ ಒಬ್ಬರಿಗೆ ಮಾತ್ರ ಶಿಕ್ಷೆಯಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ಇಲಾಖೆಯ ವೈಫಲ್ಯವೆ? ಅಥವಾ ಇದರಲ್ಲಿ ಬೇರೆ ಏನಾದರೂ ವ್ಯವಹಾರ ನಡೆದಿದೆಯೋ ಎಂಬುದನ್ನು ಸೃಷ್ಟೀಕರಿಸಬೇಕು, ಮೂರನೆಯದಾಗಿ, 20-12-1994ರಂದು 150 ಕೋಟಿ ರೂಪಾಯಿಯ ಮಾದಕ ದ್ರವ್ಯ ಮುಂಬಯಿ ಹಾಗೂ ದೆಹಲಿಯ ಅಪರಾಧ ವಿಭಾಗದವರು ಅಪರಾಧಿಗಳಿಗೆ ಅಧಿಕಾರಿಗಳಿಂದ ರಕ್ಷಣೆ ಸಿಕ್ಕಿರುತ್ತದೆ ಎಂದು ತಿಳಿದು ಬಂದಿದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದೇಯೇ?

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕರ್ನಾಟಕದಲ್ಲಿ ಸಾಕಷ್ಟು ಇಂಥಾದ್ದು ಇದೆ ಎಂದು ನಮಗೆ ತಿಳಿದು ಬಂದಿದೆ, ನಮ್ಮ ಕರ್ನಾಟಕದಲ್ಲಿ ನಾರ್ಕೋಟಿಕ್ ಎನ್ನುವ ಒಂದು ಔಷಧಿಯನ್ನು ಪತ್ತೆ ಹಚ್ಚುವುದಕ್ಕೆ ನಮ್ಮ ಹತ್ತಿರ ಇರತಕ್ಕಂತಹ ಸಿಬ್ಬಂದಿ ಎಂದು ಹೇಳಿದರೆ ಒಬ್ಬರೇ ಒಬ್ಬರು ಡಿ.ಸಿ. ಇದ್ದಾರೆ. ಅವರು ಈ ಕೆಲಸವನ್ನು ಮಾಡುತ್ತಾ ಇದ್ದಾರೆ. ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆಂದರೆ ಒಬ್ಬರಿಗೆ ಮಾತ್ರ ಶಿಕ್ಷೆಯಾಗಿದೆ, ಇನ್ನು ಕೆಲವರಿಗೆ ಏಕೆ ಶಿಕ್ಷೆಯಾಗಿಲ್ಲ ಎಂದು. ಇದರಲ್ಲಿ ಕೆಲವರನ್ನು ಹಿಡಿದಿದ್ದೇವೆ, ಇನ್ನು ಕೆಲವು ಕೋರ್ಟ್‌ನಲ್ಲಿವೆ. ಕೆಲವು ಅಪರಾಧಿಗಳು ತಲೆಮರೆಸಿಕೊಂಡಿದ್ದಾರೆ ., ಅವರು ಗಳು ಸಿಗೂತ್ತಲೇ ಇಲ್ಲ. ಅವರನ್ನು ಹುಡುಕುವುದರಲ್ಲಿ ಪ್ರಯತ್ನ ನಡೆಸುತ್ತಿದ್ದೇವೆ. ಬೇರೆ ವಿಚಾರಗಳಲ್ಲಿ ನಾವು ಮೀನಮೇಷ ಎಣಿಸಿದರೂ ಇಂತಹ ಒಂದು ಕೃತ್ಯದಲ್ಲಿ ತೊಡಗಿರುವಂಥ ಸಮಾಜ ಘಾತಕ ಶಕ್ತಿಗಳನ್ನು ಹಿಡಿಯುವ ದಿಸೆಯಲ್ಲಿ ಏನೇ ಕಷ್ಟವಾದರೂ ಬಹಳ ಜವಾಬ್ದಾರಿಯುತ ಕೆಲಸವನ್ನು ಮಾಡುತ್ತೇವೆ. ಇಂಥದ್ದರ ಬಗ್ಗೆ ಮುನ್ನೆಚ್ಚರಿಕೆ ವಹಿಸುತ್ತೇವೆಂದು, ತಮ್ಮ ಮುಖಾಂತರ ಸನ್ಮಾನ್ಯ ಸದಸ್ಯರುಗಳಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಗಡಿ ಪ್ರದೇಶದಲ್ಲಿರತಕ್ಕಂಥ ತಾಲ್ಲೂಕ್ ಮತ್ತು ಜಿಲ್ಲೆಗಳಿಂದ ನಮ್ಮ ಕರ್ನಾಟಕ ಸಾರಾಯಿ ಮತ್ತು ಮತ್ತುಬರಿಸುವ ಔಷಧಿಗಳು ಆಂಧ್ರ ಪ್ರದೇಶಕ್ಕೆ ಕಳ್ಳತನದಿಂದ ಸಾಗುತ್ತಿವೆ ಎಂದು ತಿಳಿದು ಬಂದಿದೆ. ನನಗೆ ಗೊತ್ತಿರುವ ಪ್ರಕಾರ ಒಂದೊಂದು ತಾಲ್ಲೂಕಿನಿಂದ ಪ್ರತಿದಿವಸ ಕನಿಷ್ಟ 50 ಸಾವಿರ ರೂಪಾಯಿಯಷ್ಟು ಬೆಲೆಬಾಳುವಂಥ ಸಾರಾಯಿಯನ್ನು ಕಳ್ಳತನದಿಂದ.....

ಅಧ್ಯಕ್ಷರು : ತಾವು ಹೇಳುತ್ತಿರುವುದೇ ಬೇರೆ. ಇದೇ ಬೇರೆ. ಇದು ನಾರಕೋಟಿಕ್ಸ್‌ಗೆ ಸಂಬಂಧಪಟ್ಟದ್ದು.

10.20 ಎ.ಎಂ

ಶ್ರೀ ಎನ್. ಯೋಗೀಶ್‌ಭಟ್ : ಸನ್ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಅದರಲ್ಲಿಯೂ ವಿದೇಶಿ ವಿದ್ಯಾರ್ಥಿಗಳು ಇರುವಂತಹ ಕಡೆಗಳಲ್ಲಿ ಇವತ್ತಿಗೂ ವ್ಯವಸ್ಥಿತವಾದ ನರ್‌ಕೋಟಿಕ್ಸ್ ಡ್ರಗ್ಸ್‌ನ ವಿತರಣೆ ಮಾಡುವ ಗ್ಯಾಂಗ್ ಇದೆ. ಇದರ ಬಗ್ಗೆ ಪೋಲೀಸ್ ಇಲಾಖೆಯ ಗಮನಕ್ಕೆ ಬಂದರೂ ನಿಶ್ಚಿತವಾಗಿ ಅದನ್ನು ಹಿಡಿಯುವುದಕ್ಕೆ ವಿಫಲರಾಗಿದ್ದಾರೆ. ನನಗೆ ಸಿಕ್ಕಿದ ಮಾಹಿತಿ ಮತ್ತು ಸಂಬಂಧಪಟ್ಟ ಇಲಾಖೆಗಳ ಮಾಹಿತಿಗಳ ಪ್ರಕಾರ ಈ ಜಾಲ ಎಲ್ಲಿದೆ ಅಲ್ಲಿ ಹೋಗಿ ನೋಡಿದಾಗ ಏನೇನೂ ಗುರುತುಗಳು ಸಿಗುವುದಿಲ್ಲ, ಅಂದರೆ ಈ ಜಾಲಕ್ಕೆ ಏನೋ ಒಂದು ವ್ಯವಸ್ಥಿತವಾದ ಲಿಂಕ್ ಇದ್ದಹಾಗೆ ಕಾಣುತ್ತದೆ. ಆದ್ದರಿಂದ ವಿಶೇಷವಾಗಿ ವಿದ್ಯಾರ್ಥಿಗಳ ಜೀವನ ಹಾಳಾಗುವುದನ್ನು ತಡೆಗಟ್ಟಲು ಒಂದು ವಿಶೇಷವಾದ ಪಡೆಯನ್ನು ಮಾಡಿಕೊಂಡು ಇದರ ಜೊತೆಯಲ್ಲಿ ಈ ತರಹ ನರ್‌ಕೋಟಿಕ್ಸ್‌ಡ್ರಗ್ಸ್‌ನ ಹೆಚ್ಚಿನ ಸಂಪಾದನೆ ಕೆಲಸದಲ್ಲಿ ವಿದೇಶದ ಕೆಲವು ಗುಂಪುಗಳು ಸೇರಿಕೊಂಡಿವೆ. ಇವರು ನಮ್ಮ ದೇಶದ ಜನತೆಯನ್ನು ಹಾಳುಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ತಾವು ವಿಶೇಷ ಪಡೆಯನ್ನು

ನೇಮಿಸಿಕೊಂಡು ಈ ನಿಟ್ಟಿನಲ್ಲಿ ಅಮೂಲಾಗ್ರವಾಗಿ ಪರಿಶೀಲನೆ ಮಾಡಿ ನರ್‌ಕೋಟಿಕ್ಸ್‌ನ್ನು ಸಮಗ್ರವಾಗಿ ನಾಶ ಮಾಡುವಂತಹ ವ್ಯವಸ್ಥೆ ಮಾಡುವಂತೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಬಲ ಇಲ್ಲದ ಕಾರಣ ಈ ಡ್ರಗ್ಸ್ ಹಾವಳಿ ಬೆಳೆಯುವುದಕ್ಕೆ ಅವಕಾಶ ಆಗಿದೆ. ಇಡೀ ಕರ್ನಾಟಕಕ್ಕೆ ನಮ್ಮಲ್ಲಿರತತಹವರು ಒಬ್ಬರೇ ಡೆಪ್ಯೂಟಿ ಕಮಿಷನರ್ ಇದರ ಜೊತೆಗೆ ನಾವು ಪೋಲೀಸ್ ದಳವನ್ನು ಬಳಸಿಕೊಂಡಿದ್ದೇವೆ. ನಮ್ಮ ಅಬಕಾರಿ ಸಬ್‌ಇನ್ಸ್‌ಪೆಕ್ಟರುಗಳು ಎಲ್ಲರೂ ಕೂಡ ಇದರ ಬಗ್ಗೆ ಗಮನ ಹರಿಸುತ್ತಾ ಇದ್ದಾರೆ. ಇವತ್ತು ನಾವು ಈ ಇಲಾಖೆಯ ಸ್ಟಾಫ್‌ಜಾಸ್ತಿ ಮಾಡುವುದಕ್ಕೋಸ್ಕರ ವಿಶೇಷ ದಳವನ್ನು ರಚಿಸಿಬೇಕೆಂದು ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ. ನಮಗೆ ಮಂಜೂರಾತಿ ಸಿಕ್ಕಿದ ಮೇಲೆ ನಮ್ಮ ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದಕ್ಕೆ ನಾವು ಸಂಪೂರ್ಣವಾಗಿ ಸ್ಪಂದಿಸುತ್ತೇವೆ. ಅವರ ಆಸೆ ಈಡೇರಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾವು ಮುಂದಿನ ದಿನಗಳಲ್ಲಿ ಮಾಡುತ್ತೇವೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಸಬಯುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನನ್ನ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ ನಾನು ಸಭಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತಾ ಪ್ರಶ್ನೆ ಕೇಳುವುದು ಏನೆಂದರೆ ಈ ಮಾದಕ ದ್ರವ್ಯ ಅವ್ಯವಹಾರ ಬಹಳವಾಗಿ ನಡೆದಿದೆ. ಮಣಿಪಾಲ ಬಹಳ ದೊಡ್ಡ ವಿದ್ಯಾಕೇಂದ್ರವಾಗಿ ಬೆಳೆಯುತ್ತಾ ಇದೆ. ಬೆಂಗಳೂರಿನಲ್ಲಿಂತೂ ಸಿಕ್ಕಾಪಟ್ಟೆ ಮಾದಕ ದ್ರವ್ಯಗಳನ ಅಪರಾಧಗಳು ನಡೆಯುತ್ತಾ ಇವೆ. ಇದನ್ನು ತಡೆಗಟ್ಟಲು ಅಬಕಾರಿ ಉಪಆಯುಕ್ತರವರನ್ನು ಆದಷ್ಟು ಬೇಗ ನೇಮಕಾತಿ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಆದಷ್ಟು ಶೀಘ್ರವಾಗಿ ಮಾಡುತ್ತೇನೆ. ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಬೆಂಗಳೂರು ನರ್‌ಕೋಟಿಕ್ಸ್ ಡ್ರಗ್ಸ್ ಕೇಂದ್ರ ಆಗುತ್ತಾ ಇದೆ ಎನ್ನುವ ವಿಷಯ ತಿಳಿದು ಭಯ ವಾಗುತ್ತದೆ. ಇತ್ತೀಚೆಗೆ ಅಲ್ಲಿದ್ದಂತಹ ಒಂದು ಟ್ರಾನ್ಸಪೋರ್ಟ್ ಕಂಪನಿಗೆ ಸಂಬಂಧಪಟ್ಟ ಹಾಗೆ ಒಂದು ಗೊಡಾನ್‌ನಲ್ಲಿ ಕೋಟ್ಯಾಂತರ ರೂಪಾಯಿಗಳ ನರ್‌ಕೋಟಿಕ್ಸ್ ಸಿಕ್ಕಿದೆ, ಇದನ್ನು ಕೇಂದ್ರ ಸರ್ಕಾರದವರು ಹಿಡಿದದ್ದು ಆಗಿರಬಹುದು. ಅದನ್ನು ನಾಶ ಮಾಡುವಾಗ ಅದರ ಬೆಲೆ ಕೋಟ್ಯಾಂತರ ರೂಪಾಯಿಗಳು ಆಗಿರುವುದರಿಂದ ಯಾವ ಮಟ್ಟದ ಅಧಿಕಾರಿಗಳು ನಾಶ ಮಾಡುವಾಗ ಪ್ರತ್ಯಕ್ಷವಾಗಿ ಇರುತ್ತಾರೆ ಅಥವಾ ಅದು ಯಥಾಸ್ಥಿತಿಯ ಚಾಲನೆಯಲ್ಲಿ ಹೋಗುತ್ತದೆಯೇ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಇದಕ್ಕೆ ಕಾನೂನು ವ್ಯಾಪ್ತಿಯಲ್ಲಿ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳಬೇಕು, ಆ ರೀತಿಯಾಗಿ ತೆಗೆದುಕೊಂಡು ಅದನ್ನು ನಾಶ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ತೀರ್ಥಹಳ್ಳಿ ಪೋಲೀಸ್ ಠಾಣೆಯಲ್ಲಿನ ಸಿಬ್ಬಂದಿಗಳು

803 - ಶ್ರೀ ಆಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೂ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಜನಸಂಖ್ಯೆ ಹಾಗೂ ಪೊಲೀಸ್‌ಸಿಬ್ಬಂದಿಯ ಅನುಪಾತವೇನು.

ಆ) ತೀರ್ಥಹಳ್ಳಿ ಪೊಲೀಸ್ ಠಾಣೆಯಲ್ಲಿನ ಸಿಬ್ಬಂದಿಗಳ ಸಂಖ್ಯೆ ಎಷ್ಟು.